# ಭೂಮಿಗೀತ

ಒಬ್ಬ ವ್ಯಕ್ತಿಗೆ ಜೀವಿಸಲು ಎಷ್ಟು ಭೂಮಿ ಬೇಕು? ಎಂಬ ಪ್ರಶ್ನೆಯನ್ನು ಮೊದಲು ಕೈಗೆತ್ತಿಕೊಂಡವರು ಭೂಮಿಯ ಸಮ ಹಂಚಿಕೆಯ ಪರವಾಗಿದ್ದ ಸಾಮಾಜಿಕ ಹೋರಾಟಗಾರರು. ಜೊತೆಗೆ ಜಗತ್ತಿನ ಪ್ರಸಿದ್ಧ ಲೇಖಕರಾದ ಕೌಂಟ್ ಲಿಯೊ ಟಾಲ್‌ಸ್ಟಾಯ್, ರವೀಂದ್ರನಾಥ ಟ್ಯಾಗೋರ್, ಶಿವರಾಮ ಕಾರಂತ ಮೊದಲಾದ ಲೇಖಕರು ಈ ಪ್ರಶ್ನೆ ಕೇಳುತ್ತಲೇ ಬಂದಿದ್ದಾರೆ. ಕನ್ನಡನಾಡಿನಲ್ಲಿ ಐವತ್ತರ ದಶಕದಲ್ಲಿ ನಡೆದ ‘ಕಾಗೋಡು ರೈತ ಹೋರಾಟ’ದಲ್ಲಿ ನೂರಾರು ಬಡ ಗೇಣಿದಾರರು ಇದೇ ಪ್ರಶ್ನೆಯನ್ನು ಮುಂದುಮಾಡಿ ಚಳವಳಿಯನ್ನು ರೂಪಿಸಿದ್ದು ಈಗ ಇತಿಹಾಸ. ತೆಲಂಗಾಣ ರೈತ ಹೋರಾಟ ತಲೆಯೆತ್ತಿ ನಿಂತಿದ್ದು ಇದೇ ಭೂ ಒಡೆತನವನ್ನು ಪ್ರಶ್ನಿಸಿ! ಹಾಗೆಯೇ ಕಯ್ಯೂರು ರೈತರ ಹೋರಾಟ ಇವೆಲ್ಲವೂ ಈ ಭೂಮಿಯ ರಕ್ತಸಿಕ್ತ ಚರಿತ್ರೆಯನ್ನೇ ಹೇಳುತ್ತವೆ.

ಭೂಮಿಯ ಒಡೆತನ ಒಬ್ಬನೇ ವ್ಯಕ್ತಿಯಲ್ಲಿ ಕೇಂದ್ರೀಕೃತವಾದಷ್ಟೂ ಅಲ್ಲಿ ಭೂಮಿಯಿಲ್ಲದವರ ಮತ್ತು ಶ್ರೀಮಂತರ ನಡುವಿನ ಕಂದರ ದೊಡ್ಡದಾಗಿದೆ ಎಂದೇ ಅರ್ಥ. ಯಾವುದೇ ಭೂಮಿ ಮನುಷ್ಯನ ಒಡೆತನಕ್ಕೆ ಸೇರುವ ಮೊದಲು ಅದು ಎಲ್ಲರಿಗೂ ಸೇರಿರುವ ಎಲ್ಲ ಹೂವುಗಳೂ ಅರಳುವ ನಂದನವನವಾಗಿ ಇರುತ್ತದೆ. ಯಾವಾಗ ಅದಕ್ಕೆ ಯಜಮಾನಿಕೆಯ ಬೇಲಿ ಬೀಳುತ್ತದೊ ಅಲ್ಲಿಂದ ಅದು ಖಾಸಗಿ ಆಸ್ತಿಯಾಗಿ ಪರಿವರ್ತನೆಯಾಗುತ್ತದೆ. ಇಲ್ಲಿಂದ ಬಡವರ ದುಃಖ ಆರಂಭವಾದಂತೆ. ಸಮಾಜದಲ್ಲಿ ಭೂಮಿ ಮಾರುವ ಮತ್ತು ಕೊಳ್ಳುವ ಸರಕಿನ ಮಟ್ಟಕ್ಕೆ ಯಾವಾಗ ಬದಲಾಗುತ್ತದೊ ಅಲ್ಲಿ ಬಡವರ ಪರವಾದ ಹೋರಾಟಗಳಿಗೆ ಬೀಜ ಬಿತ್ತಿದಂತೆ. ಭೂಮಿಯ ದುಃಖಗೀತೆ ಆರಂಭವಾಗುವುದು ಈ ಘಟ್ಟದಿಂದಲೇ. ಆಧುನಿಕ ಜಗತ್ತಿನ ವಿಪರ್ಯಾಸ ಅಂದರೆ ಹಣದ ಥೈಲಿಗಳಿಗೆ ಬಡವರ ನೋವಿನ ಆಲಾಪಗಳನ್ನು ಕೇಳಿಸಿಕೊಳ್ಳುವ ಕಿವಿಗಳಿರುವುದಿಲ್ಲ!

ತರ್ಕಬದ್ಧವಾಗಿ ಏನೇ ಹೇಳಿದರೂ ಮನುಷ್ಯ ಭೂಮಿಯ ಮೇಲಿನ ತನ್ನ ಕೊನೆಯ ಪಯಣವನ್ನು ಮುಗಿಸುವವರೆಗೂ ಮಣ್ಣಿನೊಂದಿಗೆ ಅವನ ಸಂಬಂಧ ಒಂದಲ್ಲ ಒಂದು ವಿಧದಲ್ಲಿ ಇದ್ದೇ ಇರುತ್ತದೆ. ಭೂಮಿಯ ಸಂಪರ್ಕ ಬಿಟ್ಟು 30–40 ಅಂತಸ್ತಿನ ಎತ್ತರದ ಮನೆಗಳಲ್ಲಿ, ಕೊನೆಗೆ ಜಗತ್ತಿನ ಅತಿ ಎತ್ತರದ ಬುರ್ಜ್ ಖಲೀಫದ ತುತ್ತತುದಿಯಲ್ಲಿ ವಾಸ ಮಾಡುವವನ ಮನೆಯಲ್ಲೂ ಪ್ಲಾಸ್ಟಿಕ್ ಕುಂಡಗಳಲ್ಲಿ ಮಣ್ಣು ಸುರಿದು ಹೂ ಗಿಡಗಳನ್ನು ಬೆಳೆಸುವುದನ್ನು ಮನುಷ್ಯ ಆನಂದಿಸುತ್ತಾನೆ. ಕೈಬೆರಳುಗಳಿಂದ ಮಣ್ಣನ್ನು ಸಡಿಲಗೊಳಿಸುತ್ತಾನೆ. ಮಣ್ಣಿನ ಸಂಪರ್ಕದಿಂದ ಮನುಷ್ಯನ ಒಂಟಿತನ, ಸಿನಿಕತನಗಳು ಕರಗಿ ಮಣ್ಣಾಗುತ್ತವೆ. ಮಣ್ಣು ಮತ್ತು ಮನುಷ್ಯನ ಸಂಬಂಧ ಭಾವನಾತ್ಮಕವಾದದ್ದು ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ. ಔದ್ಯೋಗೀಕರಣ ಮತ್ತು ನಗರೀಕರಣಗಳಿಂದಾಗಿ ಈಗ ಭೂಮಿ ಮತ್ತು ಮನುಷ್ಯನ ಸಂಬಂಧಗಳ ವ್ಯಾಕರಣವೇ ಬದಲಾಗಿಹೋಗಿದೆ!

ಹಾಗಾದರೆ ಮನುಷ್ಯನಿಗೆಷ್ಟು ಭೂಮಿ ಬೇಕು? ಟಾಲ್‌ಸ್ಟಾಯ್ ಒಂದು ಕಥೆಯಲ್ಲಿ ಭೂಮಿಯ ಬಗ್ಗೆ ಮನುಷ್ಯನಿಗಿರುವ ದುರಾಸೆಯನ್ನು ಗುರುತಿಸಿದ್ದ. ಫಲವತ್ತಾದ ನದೀ ತೀರದಲ್ಲಿ ಬೇಕಾದಷ್ಟು ಭೂಮಿ ಕಡಿಮೆ ಬೆಲೆಗೆ ದೊರೆಯುತ್ತದೆ ಎಂದು ತಿಳಿದ ಅತಿ ದುರಾಸೆಯ ಮನುಷ್ಯ ದೀನಾ ಅಲ್ಲಿಗೆ ಹೋಗಿ ಅಲ್ಲಿನ ಜನರ ಬಳಿ ಕೇಳಿದ. ಒಂದು ದಿನದಲ್ಲಿ ನೀನು ಎಷ್ಟು ನಡೆಯುತ್ತೀಯೊ ಆ ನೆಲವೆಲ್ಲ ನಿನ್ನದೆ. ಇಡೀ ದಿನಕ್ಕೆ ಒಂದು ಸಾವಿರ ಬೆಲೆ. ಎಂದು ಅಲ್ಲಿನ ಜನ ಹೇಳಿದರು. ಆದರೆ ಒಂದು ಷರತ್ತು: ನೀನು ಎಲ್ಲಿಂದ ನಡಿಗೆ ಆರಂಭಿಸುತ್ತೀಯೊ, ಅದೇ ದಿನ ಅದೇ ಜಾಗಕ್ಕೆ ಸೂರ್ಯ ಮುಳುಗುವುದರೊಳಗೆ ಬಂದ ಸೇರಬೇಕು ಎಂದರು. ಮರುದಿನ ದೀನಾ ಅಲ್ಲಿಂದಲೇ ತನ್ನ ನಡಿಗೆಯನ್ನು ಆರಂಭಿಸಿದ. ಇಡೀ ದಿನ ನಡೆದ ನಡೆದ. ಆದರೂ ಅವನಿಗೆ ತೃಪ್ತಿಯಾಗಲಿಲ್ಲ! ಅಷ್ಟರೊಳಗೆ ಪಶ್ಚಿಮದಲ್ಲಿ ಸೂರ್ಯ ಮುಳುಗತೊಡಗಿದ. ನೋಡಿದ ದೀನಾ ನಡಿಗೆಯನ್ನು ಆರಂಭಿಸಿದ ಜಾಗಕ್ಕೆ ಮರಳಲು ದಾಪುಗಾಲು ಹಾಕತೊಡಗಿದ. ಆದರೂ ತಲುಪಬೇಕಾಗಿದ್ದ ಜಾಗ ಇನ್ನೂ ದೂರವೇ ಉಳಿದಿತ್ತು. ಅವನ ದೇಹದಲ್ಲಿ ಇನ್ನು ತ್ರಾಣವಿರಲಿಲ್ಲ, ಏದುಸಿರುಬಿಡುತ್ತಾ ಓಡೋಡಿ ಬಂದ. ತಾನುಬಂದ ಜಾಗಕ್ಕೆ ತಲುಪುವಷ್ಟರಲ್ಲಿ ಸೂರ್ಯ ಮುಳುಗಿದ್ದ. ಅವನ ಬಾಯಿಂದ ನೋವಿನ ಚೀತ್ಕಾರವೊಂದು ಹೊರಟಿತು. ಅಯ್ಯೊ ನನ್ನ ಪ್ರಯತ್ನವೆಲ್ಲಾ ವ್ಯರ್ಥವಾಯಿತಲ್ಲ ಎಂದುಕೊಂಡು ನೆಲದ ಮೇಲೆ ಬೋರಲಾಗಿ ರಕ್ತಕಾರುತ್ತಾ ಬಿದ್ದ. ಕೊನೆಗೆ ಅಲ್ಲಿದ್ದವರೆಲ್ಲ ದೀನಾನನ್ನು ಅಲ್ಲಿಯೇ ಮಣ್ಣು ಮಾಡಿದರು. ಈಗ ಅವನಿಗೆ ಆರು ಅಡಿ ಮಾತ್ರ ಭೂಮಿ ಸಾಕಾಗಿತ್ತು!

ಎಂತಹ ಆಶ್ಚರ್ಯವೆಂದರೆ, ಟಾಲ್‌ಸ್ಟಾಯ್ ಕಾಲದಲ್ಲಿದ್ದ ಲೇಖಕ ಆಂಟೆನ್ ಚೆಕಾವ್ ತನ್ನದೊಂದು ಕತೆಯಲ್ಲಿ ಮನುಷ್ಯನಿಗೆ ಭೂಮಿ ಎಷ್ಟು ಬೇಕು ಎಂಬುದಕ್ಕೆ ಹೀಗೆ ಪ್ರತಿಕ್ರಿಯಿಸಿದ. ‘ಮನುಷ್ಯನಿಗೆ ಆರೇ ಅಡಿ ನೆಲ ಸಾಕೆನ್ನುತ್ತಾರೆ. ಆದರೆ ಹಾಗೆ ಸಾಲುವುದು ಹೆಣಕ್ಕೆ; ಮನುಷ್ಯನಿಗಲ್ಲ. ಮನುಷ್ಯನಿಗೆ ಬೇಕಾಗಿರುವುದು ಆರಡಿ ಭೂಮಿಯಲ್ಲ; ಎಕರೆಗಟ್ಟಲೆ ಜಮೀನಲ್ಲ, ಪ್ರಕೃತಿ; ತನ್ನ ಶಕ್ತಿ, ಸ್ವಭಾವಗಳನ್ನು ಪ್ರಕಟಿಸಲು ವಿಸ್ತಾರವಾದ ಪ್ರದೇಶ’.

ರವೀಂದ್ರನಾಥ ಟ್ಯಾಗೋರ್ ಅವರ ‘ದೊ ಬಿಘೆ ಜಮೀನ್’ ಕಥೆಯಲ್ಲಿ ಉಫೇನ್ ಎನ್ನುವ ಬಡರೈತನ ಬಳಿಯಿದ್ದ ಎರಡು ಬಿಘೆ ಜಮೀನನ್ನು ಅವನ ಪಕ್ಕದ ಶ್ರೀಮಂತ ರೈತ ತನ್ನ ತೋಟವನ್ನು ವಿಸ್ತರಿಸಲು ಕ್ರಯಕ್ಕೆ ಕೇಳಿದ. ಉಫೇನ್ ಭೂಮಿ ಕೊಡಲು ನಿರಾಕರಿಸಿದ. ಆಗ ಶ್ರೀಮಂತ ಮೋಸದಿಂದ ಪತ್ರ ಬರೆಸಿಕೊಂಡು ಬಡರೈತನ ಭೂಮಿಯನ್ನು ಕಸಿದುಕೊಂಡ. ಇದಾದ ಹದಿನಾರು ವರ್ಷಗಳ ನಂತರ ಬಡರೈತ ಸನ್ಯಾಸಿಯಾಗಿ ಮರಳಿ ತನ್ನ ಭೂಮಿಯ ಬಳಿ ಬಂದು, ಮಾವಿನ ಮರದ ಕೆಳಗೆ ನಿಂತ. ಅಲ್ಲಿ ಬಿದ್ದಿದ್ದ ಎರಡು ಮಾವಿನ ಹಣ್ಣುಗಳನ್ನು ಕೈಗೆತ್ತಿಕೊಂಡ. ಅದನ್ನು ನೋಡಿದ ತೋಟದ ಮಾಲಿ ನೀನೊಬ್ಬ ಕಳ್ಳ ಎಂದು ಸನ್ಯಾಸಿ ವೇಷದ ರೈತನನ್ನು ತೋಟದಿಂದ ಆಚೆಗೆ ನೂಕಿದ.

ಕನ್ನಡದ ಚೋಮ ಸ್ವಂತ ಉಳುಮೆ ಮಾಡಲು ‘ನೇಗಿಲಿನ ಯೋಗ ಬಂದೀತು’ ಎಂದು ದೈವದ, ಪಂಜುರ್ಲಿ ಭೂತಕ್ಕೆ ಅಡ್ಡಬಿದ್ದರೂ ಅವನಿಗೆ ಭೂಮಿ ದೊರೆಯಲಿಲ್ಲ! ತನ್ನ ಸಂತತಿಯವರಿಗಾದರೂ ಭೂಮಿ ದೊರೆಯಲಿ ಎಂದು ಅವನ ದುಡಿ ಈಗಲೂ ನುಡಿಯುತ್ತಲೇ ಇದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಮ್ಮ ರಾಜ್ಯದಲ್ಲಿ ಅನೇಕ ರೈತಪರ ಚಳವಳಿಗಳು ನಡೆದಿವೆ. ಅವುಗಳಲ್ಲಿ ಕರ್ನಾಟಕ ರಾಜ್ಯ ರೈತಸಂಘದ ಚಳವಳಿ ಅತ್ಯಂತ ಪ್ರಮುಖವಾದುದು. ಆದರೆ, ಈ ಯಾವ ಚಳವಳಿಗಳೂ ರೈತನನ್ನು ಪ್ರಮುಖ ರಾಜಕೀಯ ಶಕ್ತಿಯನ್ನಾಗಿ ಮಾಡಲು ಸಾಧ್ಯವಾಗಲಿಲ್ಲ.

  – ಕೆ.ಪಿ.ಪೂರ್ಣಚಂದ್ರ ತೇಜಸ್ವಿ

- ಜೀವ ಹೋಗುತ್ತಿದೆ ಎನ್ನುವಾಗ ವ್ಯಾಕರಣ ಉಪಯೋಗಕ್ಕೆ ಬರುವುದಿಲ್ಲ.

  —ಆದಿ ಶಂಕರಾಚಾರ್ಯ

- ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನು ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.

  —ಸ್ವಾಮಿ ವಿವೇಕಾನಂದ

- ನಾಡೇ ನುಡಿಯು ನುಡಿಯೇ ನಾಡು ಸ್ವತಂತ್ರ ದೇಶಕೆ ಬೇರಾವುದು ಹಾಡು ಕನ್ನಡಕೇತಕೆ ಹರನುಡಿಯೊಜ್ಜೆ ಹೇಸುವುದೇ ನುಡಿಗಿಳಿಯಲು ಬಿಜ್ಜೆ.

  —ಪು.ತಿ. ನರಸಿಂಹಾಚಾರ್

- ಕಂಠ ತೊಟ್ಟವ ಗುರುವಲ್ಲ/ ಕಾವಿ ಹೊತ್ತವ ಜಂಗಮನಲ್ಲ/ ಶೀಲ ಕಟ್ಟಿದವ ಶಿವಭಕ್ತನಲ್ಲ/ ನೀರು ತೀರ್ಥವಲ್ಲ ಕೂಳು ಪ್ರಸಾದವಲ್ಲ.

  —ಅಂಬಿಗರ ಚೌಡಯ್ಯ

- ಸುಖ, ಸಂತೋಷದ ಮೂಲವೇ ಮನಸ್ಸಾಗಿದೆ.

  —ಗೌತಮ ಬುದ್ಧ

- ಸೃಷ್ಟಿಯೊಳಗಿನ ಪ್ರತಿಯೊಂದು ಮಗುವೂ ಕಲಾಕಾರನೇ. ಆದರೆ ಬೆಳೆದಂತೆಲ್ಲಾ ಆ ಕಲಾವಂತಿಕೆಯನ್ನು ಉಳಿಸಿಕೊಳ್ಳುವುದೇ ಸಮಸ್ಯೆ.

  —ಪ್ಯಾಬ್ಲೋ ಪಿಕಾಸೊ